

ಕ್ರಮ ಅನ್ನಿಸಿ ನಾನು ಹಾಗೇ ಮಾಡುತ್ತಿದ್ದೆನು. ಏನಾದರೂ ಹೊಸದು ಹೊಳೆದ ಕೂಡಲೇ ಅದನ್ನು **Note** ಮಾಡಿಕೊಳ್ಳುತ್ತಿದ್ದೆ. ಕಿಸೆಯಲ್ಲಿದ್ದ ಕಾಗದ ತುಣುಕು, ಬಸ್ ಟಿಕೇಟ್ ಯಾವುದಾದರೂ ಸರಿಯೆ. ರಚಿಸಬೇಕಾದ ಕೃತಿಯ ಇಡೀ ರೂಪವೇನು ಆ ಕ್ಷಣದಲ್ಲಿ ಹೊಳೆಯುತ್ತಿರಲಿಲ್ಲ. ಏನೋ ಒಂದು ಕಚ್ಚಾ ರೂಪ, ಶೀರ್ಷಿಕೆ, ಪಾತ್ರ, ಸನ್ನಿವೇಶ, ಇಲ್ಲವೇ ಯಾವುದೋ ಒಂದು ರೂಪಕ ಹೀಗೆ ಆ ಕ್ಷಣಕ್ಕೆ ಏನು ಹೊಳೆಯುತ್ತದೆಯೋ ಅದನ್ನು ಬರೆದಿಟ್ಟುಕೊಳ್ಳುವ ರೂಢಿ ಬೆಳೆಸಿಕೊಂಡೆನು. ಹಗಲು ಹೊತ್ತಿನಲ್ಲಿ ಈ ಹೊಳಹುಗಳನ್ನು ನಾನು ಸುಲಭವಾಗಿ ದಾಖಲಿಸಿಕೊಳ್ಳುತ್ತಿದ್ದೆ. ರಾತ್ರಿ ಹೊತ್ತಿನಲ್ಲಿ ಅದೇ ಮಲಗಿದಾಗ, ನಿದ್ರೆ ಆಗಿ ಎಚ್ಚರವಾದಾಗ ಹೀಗೆ ಹಾಸಿಗೆಯಲ್ಲಿದ್ದಾಗ ನಮೂದಿಸುವುದೇ ತುಸು ಕಷ್ಟವಾಗುತ್ತಿತ್ತು. ದುರಂತ ಏನಂದರೆ ಬಹು ಅದ್ಭುತವಾದ ಅಪರೂಪದ ಒಳ್ಳೊಳ್ಳೆ ಆಲೋಚನೆಗಳು ಬೆಳಗೂ ಮುಂಜಾನೆ ಬ್ರಾಹ್ಮಿಮುಹೂರ್ತ ಅಂತಾರಲ್ಲ... ಆ ಸಮಯದಲ್ಲಿ, ಅಂದರೆ ನಸುಕಿನಲ್ಲಿ ತುಸು ಎಚ್ಚರವಾಗಿ ಮತ್ತೆ ಸಕ್ಕರಿ ನಿದ್ರೆಗೆ ಜಾರುವ ಹೊತ್ತಿನಲ್ಲಿ ಬರುತ್ತಿದ್ದವು. ನಾನು ಭಯಂಕರ ನಿದ್ದೆಬಡುಕ! ಹಾಸಿಗೆಯಿಂದ ಎದ್ದು ದಾಖಲಿಸಲಾರದಷ್ಟು ಮಹಾನ್ ಸೋಮಾರಿ. ಆಮೇಲೆ ಎದ್ದು